ಪಿಡಬ್ಲುಃ 27, ಸಿಡಬ್ಲುಃ 60

**1ನೇ ಅಧಿಕ ಜಿಲ್ಲಾ ವ ಸತ್ರ ನ್ಯಾಯಾಧೀಶರು , ಧಾರವಾಡ ಮೊಕ್ಕಾಂ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ**

ಸಾಕ್ಷಿದಾರರ ಹೆಸರು : ಮಹಾಲಿಂಗಪ್ಪಾ ತಂದೆಃ ಗುಡ್ಡಪ್ಪಾ ತಿಮ್ಮೇನಹಳ್ಳಿ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ARSI

ವಾಸಸ್ಥಳ : ಹುಬ್ಬಳ್ಳಿ

( ದಿನಾಂಕ 16-07-2026 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ಹುಬ್ಬಳ್ಳಿಯ CAR ಘಟಕದಲ್ಲಿ ARSI ಆಗಿ ಸುಮಾರು 20 ವರ್ಷಗಳ ಕಾಲ ಕೆಲಸ ಮಾಡಿ, ನವೆಂಬರ್ 2025 ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದಿರುತ್ತೇನೆ. ನಾನು ಸೇವೆಯಲ್ಲಿದ್ದಾಗ ಇಲಾಖಾ ವತಿಯಿಂದ ಫೋಟೋಗಳನ್ನು ಇಲಾಖಾ ಕ್ಯಾಮರಾದಿಂದ ತೆಗೆಯುತ್ತಿದ್ದೆನು.

2. ದಿಃ05-07-2022 ರಂದು ನಾನು ಕರ್ತವ್ಯದಲ್ಲಿದ್ದಾಗ ವಿದ್ಯಾನಗರ ಪೋಲಿಸ ಠಾಣೆಯ Inspector ರವರು ಮಧ್ಯಾಹ್ನ ಸುಮಾರು 2-45 ಸಮಯಕ್ಕೆ ಫೋನ ಮಾಡಿ president Hotel ಬಳಿ ಬರಲು ಹೇಳಿದರು. ಅದರಂತೆ ನಾನು ಹೊರಟು ಹೊಟೇಲನ್ನು ತಲುಪಿದಾಗ ಮಧ್ಯಾಹ್ನ ಸುಮಾರು 3-15 ಗಂಟೆಯಾಗಿತ್ತು. President Hotel ಒಳಗೆ ಕರೆದುಕೊಂಡು ಹೋಗಿ ಘಟನಾ ಸ್ಥಳವನ್ನು ತೋರಿಸಿದರು. ಅಲ್ಲಿ ಸಿಬ್ಬಂದಿಗಳು ಮತ್ತು ಪಂಚಸಾಕ್ಷಿಗಳು ಇದ್ದರು. ಘಟನಾ ಸ್ಥಳದ ಫೋಟೋಗಳನ್ನು ನಾನು ತೆಗೆದಿರುತ್ತೇನೆ. ಮಧ್ಯಾಹ್ನ 3-30 ರಿಂದ ಸಂಜೆ ಸುಮಾರು 6-00 ರವರೆಗೆ ಪೋಲಿಸರು ಮಹಜರ ಮಾಡಿದರು. ಮಹಜರ ಕಾಲಕ್ಕೆ ನಾನು ಫೋಟೋ ತೆಗೆದ ಬಗ್ಗೆ ನನ್ನ ಸಹಿಯನ್ನು ಮಹಜರಿಗೆ ಮಾಡಿರುತ್ತೇನೆ. ನಿಪಿ-17 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಅದನ್ನು **ನಿಪಿ-17(ಎಫ್)** ಎಂದು ಗುರುತಿಸಲಾಯಿತು. ಮಹಜರ ಕಾಲಕ್ಕೆ ನಾನು ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-19 ರಿಂದ ನಿಪಿ-38 ಫೋಟೋಗಳನ್ನು ನೋಡಿ ಸಾಕ್ಷಿಯು ಮಹಜರ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸಿದ್ದಾರೆ.

3. ನಾನು ತೆಗೆದ ಫೋಟೋಗಳನ್ನು ಮುಂಡರಗಿ ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತೇನೆ.

4. ದಿಃ 14-08-2022 ರಂದು ಪುನಃ ನನ್ನನ್ನು ವಿದ್ಯಾನಗರ ಪೋಲಿಸ ಠಾಣೆಗೆ ಕರೆಸಿದ್ದರು. ಆರೋಪಿಗಳ ಫೋಟೋ ತೆಗೆಯುವಂತೆ ಹೇಳಿದರು. ಪೋಲಿಸ ಠಾಣೆಯಲ್ಲಿದ್ದ ಆರೋಪಿಗಳ ಫೋಟೋ ನಾನು ತೆಗೆದಿರುತ್ತೇನೆ. ಆರೋಪಿ ಮಂಜುನಾಥನ 7 ಫೋಟೋ ಮತ್ತು ಆರೋಪಿ ಮಹಾಂತೇಶನ 9 ಫೋಟೋಗಳನ್ನು ನಾನು ತೆಗೆದಿರುತ್ತೇನೆ. ಈ ಬಗ್ಗೆ ಮಹಜರ ಮಾಡಿರುತ್ತಾರೆ. ಆ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು **ನಿಪಿ-110(ಸಿ)** ಎಂದು ಗುರುತಿಸಲಾಯಿತು. ನಿಪಿ-111 ಮತ್ತು ನಿಪಿ-112 ಫೋಟೋವನ್ನು ನೋಡಿ ಗುರುತಿಸಿದ್ದಾರೆ. ವಿಸಿ ಮೂಲಕ ಹಾಜರಾದ ಆರೋಪಿಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದಾರೆ.

5. ನಾನು ಫೋಟೋ ತೆಗೆದು ಆ ಫೋಟೋಗಳನ್ನು ತನಿಖಾಧಿಕಾರಿಗೆ ಕೊಟ್ಟಿರುವುದನ್ನು ಹೊರತುಪಡಿಸಿ, ಮಹಜರಿಗೆ ಸಹಿ ಮಾಡಿರುವುದನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ.

ಈ ಹಂತದಲ್ಲಿ ವಿಶೇಷ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದ**

6. ದಿಃ 14-08-2022 ರ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65ಬಿ ರ ಧೃಡಿಕರಣ ಪತ್ರವನ್ನು ಸಾಕ್ಷಿಗೆ ಮುಖಾಬಲೆ ಮಾಡಲಾಗಿ, ಅದರಲ್ಲಿನ ಸಹಿ ತನ್ನದು ಎಂದು ಗುರುತಿಸಿ ಆ ಧೃಡಿಕರಣ ಪತ್ರವನ್ನು ತಾನೇ ನೀಡಿದ್ದಾಗಿ ಗುರುತಿಸಿದ್ದಾರೆ. ಸದರಿ ದಾಖಲೆಯನ್ನು **ನಿಪಿ.126** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-126(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ**

7. ನನ್ನನ್ನು ಪೋಲಿಸ ಸಿಬ್ಬಂದಿಯಾಗಿ ನೇಮಕ ಮಾಡಿದ್ದಾರೆ ಹೊರತು ಇಲಾಖಾ ಫೋಟೋಗ್ರಾಫರ ಎಂದು ನೇಮಕ ಮಾಡಿಲ್ಲ ಎಂದರೆ ಸರಿ. ನಾನು ಫೋಟೋಗ್ರಾಫಿ ತರಬೇತಿಯನ್ನು ಕ್ಷತ್ರಿ ಸ್ಟುಡಿಯೋದಲ್ಲಿ ಪಡೆದಿರುತ್ತೇನೆ. ತರಬೇತಿ ಪಡೆದ ಬಗ್ಗೆ ನನಗೆ ಯಾವುದೇ ಧೃಡಿಕರಣ ಪತ್ರ ಕೊಟ್ಟಿರುವುದಿಲ್ಲ. ಕ್ಷತ್ರಿ ಸ್ಟುಡಿಯೋ ತರಬೇತಿ ಕೇಂದ್ರ ಅಲ್ಲ

ಎಂದರೆ ಸರಿ. ತರಬೇತಿ ಕೊಟ್ಟವರ ಹೆಸರು ಹೇಳಲು ಈಗ ನನಗೆ ನೆನಪಿಲ್ಲ. ನಾನು ಬಳಸಿದ ಕ್ಯಾಮರಾ ವಿದ್ಯಾನಗರ ಪೋಲಿಸ ಠಾಣೆಯ ಇಲಾಖಾ ಕ್ಯಾಮರಾ ಆಗಿರಲಿಲ್ಲ. ಆದರೆ ನಮ್ಮ ಕಛೇರಿಯ ಇಲಾಖಾ ಕ್ಯಾಮರಾ ಆಗಿತ್ತು. ನಾನು ಬಳಸಿದ ಕ್ಯಾಮರಾದಲ್ಲಿ ತೆಗೆದ ಫೋಟೋಗಳಿಗೆ ದಿನಾಂಕನ್ನು ನಮೂದು ಮಾಡುವ ಸೌಲಭ್ಯ ಆ ಕ್ಯಾಮರಾದಲ್ಲಿ ಇರಲಿಲ್ಲ. ನಾನು ನಮ್ಮ ಇಲಾಖಾ ಕ್ಯಾಮರಾದಲ್ಲಿ ಫೋಟೋ ತೆಗೆಯದೆ ಇದ್ದ ಕಾರಣ ನಾನು ತೆಗೆದ ಫೋಟೋದಲ್ಲಿ ದಿನಾಂಕ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ.

8. ನನ್ನ ಸಮಕ್ಷಮ ಯಾವುದೇ ಮಹಜರ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಮಹಜರಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-17 ಮತ್ತು ನಿಪಿ-110 ಮಹಜರಗಳಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

9. ನಾನು ತೆಗೆದ ಫೋಟೋಗಳನ್ನು ಮುಂಡರಗಿ ಸ್ಟೂಡಿಯೋದಲ್ಲಿ ಪ್ರಿಂಟ ಹಾಕಿಸಿದ ಬಗ್ಗೆ ರಶೀತಿಯನ್ನು ಕೊಟ್ಟರು, ಆ ರಶೀತಿಯನ್ನು ನಾನು ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತೇನೆ.

10. ನಾನು ತೆಗೆದೆನು ಎಂದು ಗುರುತಿಸಿದ ಫೋಟೋಗಳನ್ನು ತಾಂತ್ರಿಕವಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸೃಷ್ಟಿಸಿದ ಫೋಟೋಗಳಿಗೆ ಪೂರಕವಾಗುವಂತೆ ನಿಪಿ-126 ಧೃಡಿಕರಣ ಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಿದ್ಯಾನಗರ ಪೋಲಿಸರ ಒತ್ತಾಯದ ಮೇರೆಗೆ ನಾನು ಈದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಆರ್ ಪಿ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನು ಅನುಮೋದಿಸುವುದಾಗಿ ನುಡಿದಿದ್ದಾರೆ.
ಮರುವಿಚಾರಣೆಃ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ )***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು, ಹುಬ್ಬಳ್ಳಿ**